doc-199
T-P-2

Regd No M 1292 34 th Year ತಾ|| 11—5—51

SATYAVADI

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಭಾರತದ ಧಾನ್ಯ ಮಸೂದೆಯಿಂದ ಭಾರತಕ್ಕೆ ಬಂಧನವೇನೂ ಇಲ್ಲ

ಮೈಸೂರ್ ಪ್ರಾಂತಕ್ಕೆ ಅಕ್ಕಿ ಕೋಟಾ ಹೆಚ್ಚಿಸಿಲ್ಲ !

ಅವೀರಕಾ ಕಾಂಗ್ರೆಸಿನ ಮುಂದಿರುವ ಭಾರತಕ್ಕೆ ಧಾನ್ಯ ಮಸೂದೆಗಳಲ್ಲಿ ರಾಜಕೀಯ ಅಥವ ವಿಭೇದ ಪರತ್ವಾಗ ಭಾವವೂ ಇಲ್ಲವೆಂದೂ, ಅದೆನ್ನೊಪ್ಪುವ ದರಲ್ಲೇನೂ ಬಾಧಕವಿಲ್ಲವೆಂದೂ ದೆಹಲಿಯಲ್ಲಿ ಪಂ|| ನೆಹರು ಅಭಿಪ್ರಾಯಪಟ್ಟಿರುವರು.

ವಿವಾಹ ಮಹೋತ್ಸವ

ಮೈಸೂರು ಸರ್ಕಾರದ ಯೋಜನೆ ಅಧಿಕಾರಿಯವರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರ ಕುಮಾರಿ ಸಾ|| ಸುಂದರಮ್ಮ ಮತ್ತು ಶಿವಮೊಗ್ಗ ಜಿಲ್ಲಾ ಮೈದ್ಯಾಧಿಕಾರಿಯವರಾದ ಡಾ|| ಎ. ಬಿ ರೇಣುಕಯ್ಯನವರ ಕುಮಾರ ಚಿ|| ಆನಂದ ಕುಮಾರ್ ಇವರ ವಿವಾಹ ನಿನ್ನೆ ಬೆಳಿಗ್ಗೆ ಮೈಸೂರು ರಾಮಾನುಜ ರಸ್ತೆಯಲ್ಲಿರುವ ಮಹಾರಾಜಾ ಛತ್ರದಲ್ಲಿ ವೈಭವದಿಂದ ಜರುಗಿತು.

ಇದೇ ತಾ|| 14 ರಲ್ಲಿ ಎಂ. ಅಂಡ್ ಎಸ್. ಎಂ. ರೈಲ್ವೆ ಕೆಲಸಗಾರರ ಕೇಂದ್ರ ಸಮಿತಿ ಹುಬ್ಬಳ್ಳಿಯಲ್ಲಿ ಸೇರಿ ಮುಷ್ಕರ ಬ್ಯಾಲಟ್ ಬಗೆಗೆ ಪರಿಶೀಲಿಸುವದು.

ಮೇ 15 ತಾ|| ಸಿಕಾರಿಪುರದ ಪಟ್ಟಣವೊಂದರಲ್ಲಿ ಈದೂ ಬರ್ದಿಯೆಂಬ ಪೈಸಿದ್ದ ದರೋಡೆಗಾರನನ್ನು ಸಾರ್ವಜನಿಕರ ಮುಂದೆ ನೇಣು ಹಾಕಲಾಗುವದೆಂದು ಕರಾಚಿ ವಾರ್ತೆ.

ಭಾರತ ಸರ್ಕಾರ ಬರ್ಮಾ ಅಕ್ಕಿ ಸಿಕ್ಕವದೆಂದು ಕೆಲವು ಪ್ರಾಂತಗಳಿಗೆ ಅಕ್ಕಿ ಕೋಟಾ ಹೆಚ್ಚಿಸಿದೆ. ಆದರೆ ಮೈಸೂರಿಗೆ ಅಕ್ಕಿ ಕೋಟ ಹೆಚ್ಚಿಲ್ಲ

ಗಾಯಕವಾಡರ ಜೂಜು ಕುದುರೆ

ಬರೋಡ ಗಾಯಕವಾಡರ ಜೂಜು ಕುದುರೆಗಳನ್ನು ತಯಾರಿಗಾಗಿ ನ್ಯೂಮಾರ್ಕೆಟ್ಟಿನ ಫ್ರೆಡ್ ಆರಂಸ್ಟ್ರಾಂಗರ ಬಳಿ ಕಳಿಸಲಾಗುವದೆಂದು ಲಂಡನ್ ವಾರ್ತೆ.

ಪಾಕಿಸ್ತಾನದಲ್ಲಿ ಕಮ್ಯುನಿಸ್ಟರ ಬಂಧನವಾರಂಭವಾಗಿದೆ. ಲಾಹೋರಿನಲ್ಲಿ 6 ಮಂದಿ ಕರಾಚಿಯಲ್ಲಿ 3 ಮಂದಿ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಬೊಂಬಾಯಿನಿಂದ ಹೋಗುವ ಪ್ರಯಾಣಿಕರಲ್ಲಿ ಸಂಕದ ಅಧಿಕಾರಿಗಳು ನೊನ್ನೆ ದಿವಸ ನೂರೆಪ್ಪತ್ತೈಂಟು ತೊಲ ಭಂಗಾರವನ್ನು ಸಕ್ಕೆಹಚ್ಚಿದರು ಹೀಗೆ ಭಂಗಾರವನ್ನು ಹೊಟ್ಟೆಯಲ್ಲಿಟ್ಟು ಕೊಂಡಿದ್ದವರೆಂದರೆ 17 ವರ್ಷದ ಹುಡುಗ ಮತ್ತು ಒರ್ವ ಹೆಂಗಸು. ಇವರ ಹೊಟ್ಟೆಯಲ್ಲಿ ಅರವತ್ತು ತೊಲೆ ಭಂಗಾರವಿತ್ತು. ಮತ್ತೋರ್ವನ ಹೊಟ್ಟೆಯಲ್ಲಿ ಐವತ್ತು ತೊಲೆ ಸಿಕ್ಕಿತು.

ಹೊಸತಹಳ್ಳಿಯಿಂದ ಚಿಕ್ಕಮಗಳೂರಿಗೆ ತಲೆಮೇಲೆ ಹೊತ್ತುಕೊಂಡು ಹೋಗುತ್ತಿದ್ದ ಇಪ್ಪತ್ತು ಮಣ ಕಾಫಿಯನ್ನು ಅಧಿಕಾರಿಗಳು ವಶಮಾಡಿಕೊಂಡರು.

ಬೆಂಗಳೂರಿನಲ್ಲಿ ಸ್ತ್ರೀ ಕಂಡಕ್ಟರರ ನೇಮಕ

ಮದ್ರಾಸಿನ ಅಡಳಿತ ಮಾದರಿಯನ್ನು ಅನುಸರಿಸುವದಲ್ಲಿ ನೊಡಲಿನಿಂದಲೂ ಹೆಸರು ಪಡೆದ ಮೈಸೂರು ರಾಜ್ಯವು ಬೆಂಗಳೂರಿನ ಸಿಟಿ ಬಸ್‌ಗಳಿಗೆ ಸ್ತ್ರೀ ಕಂಡಕ್ಟರರನ್ನು ನೇಮಿಸಲು ನಿಶ್ಚಯಿಸಿದೆ

ಪ್ರಾಯೋಗಿಕವಾಗಿ 15 ಸ್ತ್ರೀ ಕಂಡಕ್ಟರರನ್ನು ನೇಮಿಸಲಾಗುವದೆಂದು ತಿಳಿದು ಬಂದಿದೆ.

ವಾರ್ತೆಗಳು

ದೆಹಲಿಯಿಂದ ಬಿಹಾರಕ್ಕೆ ಬೇಗನೇ 2 ಸಾವಿರ ಮಣ ಗೋಧಿಯನ್ನು ರಾಣಿಕೆಯೆಂದು ಕಳಿಸಲಾಗುವದು. ನಿನ್ನೆ ಸೇರಿದ ಪ್ರಾಂತಿಕ ಅಭಿವೃದ್ಧಿ ಮಂಡಳದ ಸಭೆಯಲ್ಲಿ ಈ ನಿರ್ಣಯ ಮಾಡಲಾಯಿತು.

ಭಾರತ ಬ್ಯಾಂಕುಗಳ ಕೆಲಸಗಾರರ ಮತ್ತು ಕೆಲಸ ಕೊಡುವವರ ಸಂಬೋಳನ ಸಮಿತಿಯಲ್ಲಿ ಕಾರ್ಮಿಕ ಸಚಿವ ಶ್ರೀ ಜಗಜೀವನರಾಂವರ ಅಧ್ಯಕ್ಷತೆಯಲ್ಲಿ ಜರುಗಿ ಕಲಹಗಳನ್ನು ಸಂಧಾನ ಸಮಿತಿ ತೀರ್ಪಿಗೆ ಬಿಡುವ ನಿರ್ಣಯ ಮಾಡಿತು.

ಜಪಾನಿನ ವೇಲ್ಸ್‌ನೆಯಲ್ಲಿ ಸ್ವಂತ ಅಭಿಪ್ರಾಯ ಕೊಡುತ್ತಾ ಅಲ್ಲಿನ ಪ್ರಧಾನಿ ಸಿಗೆರೋ ಯೋಶಿಡ ಜಪಾನ್ ಪುನಶ್ಚ ಸ್ತ್ರೀಕರಣವಾಗಲೇಕೂಡದೆಂದಿರುವದಾಗಿ ಟೋಕಿಯೋ ವಾರ್ತೆ.

ಅಮೇರಿಕದ ವಿದೇಶ ಸಚಿವ ಡೀಅಚೆಸ್ಕ ರಾಜೀನಾಮೆ ಅರ್ಜಿಸವೆ ವದಂತಿ ಆಧಾರವಿಲ್ಲದೆಂದು ಅಧ್ಯಕ್ಷ ಟ್ರೂಮನ್ ವಾಷಿಂಗ್ಟನ್ನಲ್ಲಿ ತಿಳಿಸಿದ್ದಾರೆ.

ಕೆಂಪು ಚೀನಕ್ಕೆ ರಬ್ಬರ್ ಕಳಿಸದಿರೆಂದು ಬ್ರಿಟನ್ ತನ್ನ ದೂರಪ್ರಾಚ್ಯ ರಬ್ಬರ್ ಉತ್ಪಾದನಾ ಕಾಲಸಿಗಳನ್ನು ಕೇಳಿದೆಯೆಂದು ಲಂಡನ್ ವರದಿ

ಹಾಸನದ ನಾಲ್ವರು ಪೌರಸಭೆ ಸದಸ್ಯರನ್ನು ತೆಗೆದು ಹಾಕಿದ ಬಗೆಗೆ ಅಧ್ಯಕ್ಷ ಶ್ರೀ ಕಾಟೇ ತಿಮ್ಮೇಗೌಡರ ವರ್ತನೆಯನ್ನು ಪ್ರತಿಭಟಿಸಲು ಹಾಸನ ಪರ್ತಕರು ಹರತಾಳ ಆಚರಿಸಿದರು.

ಭಾರತದ ರಾಜರು ಆರ್ಥಿಕ ಪರಿಸ್ಥಿತಿ ಕಡೆ ಚಟುವಟಿಕೆ ತೋರಿದರೆ ಅವರಿಂದ ಭಾರಿ ಸೇನೆಯಾದಂತಾಗುವದು ಎಂದು ಭಾರತ ರಾಷ್ಟ್ರಾಧಿಪತಿ ರಾಜೇಂದ್ರಪ್ರಸಾದರು ಉಜ್ಜಯಿನಿಯಲ್ಲಿ ತಿಳಿಸಿದ್ದಾರೆ

ಕಾಂಗ್ರೆಸನ್ನು ಸೋಲಿಸಲು ?

ಒರಿವ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಡಲು ಸಮಾಜವಾದಿ ಪಕ್ಷವು ಹಿಂದುಳಿದ ಪಂಗಡದವರೊಡನೆ ಹಾಗೂ ಕೃಷಿಕ್ ಪ್ರಜಾ ಪರಿಷತ್‌ನೊಡನೆ ಸಹಕರಿಸಬಹುದೆಂದು ಶ್ರೀ ಜಯಪ್ರಕಾಶನಾರಾಯಣರು ನಿನ್ನೆ ಬೊಂಬಾಯಿನಲ್ಲಿ ತಿಳಿಸಿದ್ದಾರೆ. ಶ್ರೀ ಅಂಬೇಡ್ಕರ್ ಹಾಗೂ ಡಾ|| ಘೋಷರ ಸಂಗಡ ಈಗಾಗಲೇ ಸಂಪರ್ಕ ಪಡೆದಿರುವದಾಗಿ ಅವರು ತಿಳಿಸಿದರು.

ರಷ್ಯದಿಂದ ಗೋಧಿ

ಭಾರತ ಪಾರ್ಲಿಮೆಂಟಿನಲ್ಲಿ ಪಂ|| ನೆಹರು ನಿನ್ನೆ ದಿವಸ ರಷ್ಯದಿಂದ ಭಾರತಕ್ಕೆ ಗೋಧಿ ಹೊರಟಿತೆಂದು ತಿಳಿಸಿದಾಗ ಪಾರ್ಲಿಮೆಂಟ್ ಸಭ್ಯರು ಸಂತೋಷವನ್ನು ಗಟ್ಟಿಯಾಗಿ ವ್ಯಕ್ತಪಡಿಸಿದರು. ಜೂನ್ ಮೊದಲನೆ ವಾರದಲ್ಲಿ ಭಾರತಕ್ಕೆ ಬರುವದು – ಅರ್ಧ ಲಕ್ಷ ಟನ್.

ಹಿಮ್ಮಾಲಯದ ವಸ್ತುಗಳಿಂದ ನ್ಯೂಸ್‌ಪ್ರಿಂಟ್ ತಯಾರಿಸಲು ಸಲಹೆ ಕೊಡಲು ಪ್ರವೀಣರೋರ್ವರನ್ನು ಕಳಿಸಲು ವ್ಯವಸಾಯ ಸಂಸ್ಥೆಯೆನ್ನು ಭಾರತ ಸರಕಾರ ಕೇಳಿದೆ.

ಹೆಂಗಸರು ಮತ್ತು ಗಂಡಸರುಗಳಿಗೆ ಸಮ ವೇತನ ಇರಬೇಕೆಂದು ಜಿನೀವಾದಲ್ಲಿ ಸನಾವೇಶವಾಗಿರುವ ಕಾರ್ಮಿಕ ಪರಿಷತ್‌ನಲ್ಲಿ 34 ರಾಜ್ಯಗಳ ಸದಸ್ಯರು ಅಭಿಪ್ರಾಯಪಟ್ಟಿರುವರು.

ಬೊಂಬಾಯಿ ಕ್ಯಾಫರ್ಡ್ ಮಾರ್ಕೆಟ್ ಪ್ರದೇಶದಲ್ಲಿ ರಾತ್ರಿ 7 ರಿಂದ ಹತ್ತು ಗಂಟೆ ಕಾಲ ಕರ್ಫ್ಯೂ ವಿಧಿಸಲಾಗಿದೆ

ಪಾಕಿಸ್ತಾನಕ್ಕೆ ನುನಿ ಆರ್ಡರ್ ಕಳಿಸುವ ಬಗೆಗೆ ಭಾರತ ಸರ್ಕಾರ ಬಾಂಧವ್ಯ ಪಡಿಯುಲು ತೀವ್ರಾಸಕ್ತ ವಿರುವದಾಗಿ ದೆಹಲಿ ವಾರ್ತೆ.

× ಸೋಮನಾಥದಲ್ಲಿ ಲಿಂಗ ಪ್ರತಿಷ್ಠಾಪನಾನ್ನಹೋತ್ಸವ ಇಂದು ಬೆಳಿಗ್ಗೆ

ಮೂರು ಮಕ್ಕಳ ಜನನ !

ಬಾಗಲಪುರ ಮಹಿಳಾ ಆಸ್ಪತ್ರೆಯಲ್ಲಿ ಮುಹಮದೀಯ ಮಹಿಳೆಯೋರ್ವಳು ಮೊನ್ನೆ 2 ಗಂಡು ಹಾಗೂ 1 ಹೆಣ್ಣು ಮಗುವನ್ನು ಒಂದೇಬಾರಿ ಪ್ರಸವಿಸಿದಳು ಎಲ್ಲರೂ ಸುಖವಾಗಿರುವರು.

ಮಾಂಸಾಹಾರದ ವಿಷಯದಲ್ಲಿ

ಶ್ರೀ ತಿರುವಳ್ಳುವಾರ್‌ರವರ ಉಪದೇಶ

1 ಪ್ರಾಣಿಯನ್ನು ಆಹಾರವಾಗಿ ತಿನ್ನುವವರಿಗೆ ದಯೆಯೆನ್ನುವುದು ಎಲ್ಲಿಂದ ಬರಬೇಕು ?

2 ದುಂದುಗಾರನು ಏನನ್ನೂ ಕೂಡಿಡಲಾಗದಂತೆ, ಮಾಂಸಭಕ್ಷಕನ ಹೃದಯದಲ್ಲಿ ದಯೆಯೆನ್ನುವುದು ನೆಲೆಸಿರಲಾರದು

3 ಪ್ರಾಣಿವಧೆಯು ಹಿಂಸ್ರವು ; ಮಾಂಸಭಕ್ಷಣೆಯು ಪಾಪವು.

4 ಮಾಂಸಭಕ್ಷಣಾ ತ್ಯಾಗದಿಂದಲೇ ಜೀವನ ಏಳಿಗೆಯಾಗುವಿಕೆ ; ಮಾಂಸಾಹಾರಿಗೆ ನಂಕವೇ ಶರಣ್ಯವು.

5 ವಧೆಶಾಲೆಗಳಲ್ಲಿ ಪ್ರಾಣಿಗಳು ಪಡುವ ಕಷ್ಟವನ್ನು ಒಂದು ಬಾರಿ ಅವಲೋಕಿಸಿದಲ್ಲಿ ಮಾಂಸಭಕ್ಷಣೆಯು ಎಷ್ಟು ಹೇಯವಾದುದೆಂಬುದರ ಅರಿವೆಯಾಗುವುದು.

6 ಅಜ್ಞಾನ ಬಂಧನದಿಂದ ಬಿಡುಗಡೆಯನ್ನು ಹೊಂದಿದವರು ಎಂದೆಂದಿಗೂ ಮಾಂಸಾಹಾರವನ್ನು ಸೇವಿಸೆವೆಮಾಡರು .

7 ಮಾಂಸಾಹಾರಿಗೆ ಸರ್ವ ಪ್ರಾಣಿಗಳಲ್ಲಿಯೂ ಪರಮಾತ್ಮನು ನೆಲೆಸಿರುವನೆಂಬ ಅರಿವು ಉಂಟಾಗುವುದಿಲ್ಲ : ದಯಾಶೂನ್ಯನಿಗೆ ಪರಮಾತ್ಮನ ದಯೆಯು ಹೇಗೆ ಲಭಿಸೀತು ?

8 ಮಾಂಸಾಹಾರವು ವ್ಯಾಧಿಗಳನ್ನು ಸುಲಭವಾಗಿ ಹುಟ್ಟಿಸುವುದು : ಅದುದರಿಂದ ಮನೋನಿರ್ಮಲತೆಗೆ, ಮನೋದೃಢತೆಗೆ ಅಡಚಣೆಯಾದುದು ; ತನೋಗುಣಿಗೆ ಸತ್ವದ ಸುಖವು ಹೇಗೆ ದೊರೆತೀತು ?

9 ಯಾವ ಪ್ರಾಣಿಯನ್ನು ಕೊಂದ ಆ ವಿಷ್ಣುವನ್ನು ಕೊಂದಂತೆಯೇ.

(ಓಂ)



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

ರಣಜಿತ್ 11—5—51 ರಿಂದ

SAGAI ನಗಾಯಿ

ದೇಹನಾ, ಯಾಕೂಬ್, ಪ್ರೇಮನಾಥ್, ಗೋಪ್ ಪಾತ್ರವಹಿಸಿರುವ ಸಂಗೀತ, ನೃತ್ಯ, ಹಾಸ್ಯಲಹರಿಯಿಂದ ತೂಡಿದ ಅವೋಘ ಹಿಂದೀ ವಾಕ್ಚಿತ್ರ

— ಪ್ರತಿ ದಿನ 3 ಪ್ರದರ್ಶನಗಳು —

ಉಡ್‌ಲ್ಯಾಂಡ್ಸ್

11—5—51 ರಿಂದ ಅಮೋಘ ಪ್ರಾರಂಭ

ಬಿರಾ ಕಿ ರಾತ್ Birha ki Raat

ಪಾತ್ರ : ನರ್ಗಿಸ್, ದೇವಾನಂದ್, ಸ್ನೇಹಪ್ರಭಾ, ಓಂಪ್ರಕಾಶ್ (ಹಿಂದಿ ಚಿತ್ರ)

ಸಕಲರೂ ನೋಡಬೇಕಾದ ಮನೋಹರ ಚಿತ್ರ — ಪ್ರತಿ ದಿನ 3 ಆಟಗಳು

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾವಾಡುವ ಅಮೃತಪಾಶ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
'ನ್ಯೂ ಅಪೇರಾ ಟಾಕೀಸ್'
ಮೈಸೂರು

ವುಡ್‌ಲ್ಯಾಂಡ್ಸ್ —
ಬೆಳಗಿನ ಪ್ರದರ್ಶನ
11—5—51 ರಿಂದ

ಧೂಮಕೇತು

ಪಾತ್ರ— ನಾಡಿಯ, ಜಾಕ್ ಕವಾಸ್
(ರೋಮಾಂಚಕ ಹಿಂದಿ ಚಿತ್ರ)

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ ಉದಾರಾಶ್ರಯದಲ್ಲಿ ಪ್ರಕಟವಾಗುವ
- ಪ್ರಬೋಧ -
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

Edited, Printed and Published by M. S. Krishna Rao, at the Satyavadi Press Chamarajapuram Mysore